ಕೃಷ್ಣರಾಜಸಾಗರ ಅಣೆಕಟ್ಟಿನ ಮೇಲೆ ಸಂಚಾರ ನಿಲ್ಲಿಸಿರುವುದು

2176 - ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕೃಷ್ಣರಾಜಸಾಗರ ಅಣೆಕಟ್ಟಿನ ಮೇಲೆ ಸಂಚಾರವನ್ನು ನಿಲ್ಲಿಸಲಾಗಿದೆಯೆ?

ಆ) ಹಾಗಿದ್ದಲ್ಲಿ, ಎಂದಿನಿಂದ ಅದನ್ನು ನಿಲ್ಲಿಸಲಾಯಿತು ಮತ್ತು ಇದಕ್ಕೆ ಕಾರಣಗಳೇನು?

ಇ) ಬೃಂದಾವನ ಉದ್ಯಾನವನಕ್ಕೆ ಹೋಗಲು ಅನುಕೂಲವಾಗುವಂತೆ ಕೃಷ್ಣರಾಜಸಾಗರದ ಬಳಿ ಹೊಸ ಸೇತುವೆಯನ್ನು ಕಟ್ಟುವ ಪ್ರಸ್ತಾವೆ ಇದೆಯೇ?

ಈ) ಹಾಗಿದ್ದಲ್ಲಿ, ಇದರ ಅಂದಾಜು ವೆಚ್ಚವೆಷ್ಟು?

ಉ) ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಎಂದು ಮುಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಹೌದು

ಆ) 28-7-1991 ರಿಂದ ಈ ಕೆಳಗೆ ಸೂಚಿಸಿರುವ ಕಾರಣಗಳಿಂದ ವಾಹನಗಳ ಸಂಚಾರ ನಿಲ್ಲಿಸಲಾಗಿದೆ.

1) ಇತ್ತೀಚಿನ ನೆರೆ ಹಾವಳಿಯಿಂದಾಗಿ
2) ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ
3) ದುರಸ್ತಿ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಸಾರ್ವಜನಿಕರ ಹಿತ ರಕ್ಷಣೆಗಾಗಿ
4) ಭದ್ರತೆಗಾಗಿ.

ಇ) ಹೌದು

ಈ) 7 ಕೋಟಿ ರೂಪಾಯಿಗಳು (ಇತ್ತೀಚಿನ ದರಪಟ್ಟಿಯ ಪ್ರಕಾರ)

ಉ) ಹಣಕಾಸು ಒದಗಿಸಿದ ತಕ್ಷಣ ಕಾಮಗಾರಿಗಳನ್ನು ಕೈಗೊಂಡು 2-3 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಲೋಕೋಪಯೋಗಿ ಇಲಾಖೆಯಲ್ಲಿರುವ ಪಂಚಾಯಿತಿ ಪ್ರಕರಣ

2175-ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಉಳಿದಿರುವ ಪಂಚಾಯಿತಿ ಪ್ರಕರಣಗಳು ಎಷ್ಟಿವೆ-

ಆ) ಪಂಚಾಯಿತಿಗೆ ವಹಿಸಿರುವ ಪ್ರಕರಣಗಳು ಎಷ್ಟು? ಹಾಗೂ ವಹಿಸಿರುವ ದಿನಾಂಕ?

ಇ) ಆರು ತಿಂಗಳಿಂದ ಬಾಕಿ ಇರುವ ಪಂಚಾಯಿತಿ ಪ್ರಕರಣಗಳು ಎಷ್ಟು?

ಈ) ಪಂಚಾಯಿತಿ ಪ್ರಕರಣಗಳನ್ನು ಬೇಗ ತೀರ್ಮಾನ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):